**ರಾಗಿಗೆ ಬೆಂಬಲ ಬೆಲೆ ನೀಡುವುದು**

**1786 (1889); ಶ್ರೀ ಬಾಲಕೃಷ್ಣ ಸಿ. ಎನ್.**

ಅ) ರಾಜ್ಯದಲ್ಲಿ ರಾಗಿ ಬೆಳೆಯುವ ಜಿಲ್ಲೆಗಳು ಯಾವುವು;

ಆ) ರಾಜ್ಯದಲ್ಲಿ ಪ್ರತಿವರ್ಷ ಎಷ್ಟು ಪ್ರಮಾಣದ ರಾಗಿಯನ್ನು ಬೆಳೆಯಲಾಗುತ್ತಿದೆ; ಜಿಲ್ಲಾವಾರು ವಿವರಗಳನ್ನು ನೀಡುವುದು;

ಇ) ರಾಜ್ಯದಲ್ಲಿ ರೈತರು ಬೆಳೆಯುವ ರಾಗಿಗೆ ಸರ್ಕಾರ ಬೆಂಬಲ ಬೆಲೆಯನ್ನೇನಾದರೂ ಘೋಷಿಸಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ರೈತರಿಂದ ಖರೀದಿಸಿದ ರಾಗಿಗೆ ಪೂರ್ಣ ಪ್ರಮಾಣದ ಹಣವನ್ನು ಸಂದಾಯ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ರಾಗಿ ಬೆಳೆದ ರೈತರಿಗೆ ಸಕಾಲದಲ್ಲಿ ಪೂರ್ಣ ಪ್ರಮಾಣದ ಹಣವನ್ನು ಸಂದಾಯ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)**

ಅ) ರಾಜ್ಯದಲ್ಲಿ ರಾಗಿ ಬೆಳೆಯನ್ನು ಮುಖ್ಯವಾಗಿ ತುಮಕೂರು, ರಾಮನಗರ, ಹಾಸನ, ಕೋಲಾರ, ಮಂಡ್ಯ, ಚಿತ್ರದುರ್ಗ, ಚಿಕ್ಕಮಗಳೂರು, ಚಿಕ್ಕಬಬಳ್ಳಾಪುರ, ಮೈಸೂರು, ಬೆಂಗಳೂರು ನಗರ, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ದಾವಣಗೆರೆ ಮುಂತಾದ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತದೆ.

ಆ) ರಾಜ್ಯದಲ್ಲಿ ರಾಗಿ ಬೆಳೆಯನ್ನು ಪ್ರತಿ ವರ್ಷ ಸುಮಾರು 7 ಲಕ್ಷ್ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ. 2013–14 ನೇ ಸಾಲಿನಲ್ಲಿ ರಾಗಿ ಬೆಳೆಯ ಜಿಲ್ಲಾವಾರು ವಿಸ್ತೀರ್ಣ ಹಾಗೂ ಉತ್ಪಾದನೆಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕೇಂದ್ರ ಸರ್ಕಾರ 2014–15 ನೇ ಸಾಲಿಗೆ ರಾಗಿ ಬೆಳೆಗೆ ಪ್ರತಿ ಕ್ವಿಂಟಾಲ್‌ಗೆ ₹ 1550/– ಕನಿಷ್ಠ ಬೆಂಬಲ ಬೆಲೆ ನಿಗದಿ ಪಡಿಸಿದೆ.

ರಾಜ್ಯ ಸರ್ಕಾರ ರಾಗಿ ಬೆಳೆಗೆ ವಿಶೇಷ ಪ್ಯಾಕೇಜ್ ಘೋಷಿಸಿ ಕನಿಷ್ಠ ಬೆಂಬಲ ಬೆಲೆ ಜೊತೆಗೆ ಪ್ರತಿ ಕ್ವಿಂಟಾಲ್‌ಗೆ ₹ 450/– ಪ್ರೋತ್ಸಾಹ ಧನವಾಗಿ ನೀಡಿ ಒಟ್ಟಾರೆ ಪ್ರತಿ ಕ್ವಿಂಟಾಲ್‌ಗೆ ₹ 2000/– ಖರೀದಿ ಬೆಲೆ ನಿಗದಿ ಪಡಿಸಿದೆ.

ಈ) ಇಲ್ಲ. ಖರೀದಿ ಮಾಡುವ ಎಜೆನ್ಸಿಗಳಿಂದ (ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಹಾಗೂ ಕರ್ನಾಟಕ ರಾಜ್ಯ ಆಹಾರ, ನಾಗರಿಕ ಸರಬರಾಜು ನಿಗಮ) ರೈತರಿಂದ ಖರೀದಿಸಿದ ರಾಗಿಗೆ ಪೂರ್ಣ ಪ್ರಮಾಣದ ಹಣವನ್ನು ರೈತರ ಬ್ಯಾಂಕ್ ಖಾತೆಗೆ RTGS ಮೂಲಕ ನೇರವಾಗಿ ಹಣ ಪಾವತಿ ಮಾಡಲಾಗುತ್ತಿದೆ.

ಉ) ರಾಗಿ ಬೆಳೆದ ರೈತರಿಗೆ ಸಕಾಲದಲ್ಲಿ ಪೂರ್ಣ ಪ್ರಮಾಣದ ಹಣ ಸಂದಾಯ ಮಾಡಲು ಸರ್ಕಾರವು ಆವರ್ತ ನಿಧಿಯಿಂದ ಹಣ ಬಿಡುಗಡೆ ಮಾಡಿದ್ದು, ರೈತರಿಗೆ ವಿಳಂಬವಿಲ್ಲದೆ ಹಣ ಪಾವತಿ ಮಾಡಲಾಗುತ್ತದೆ.

ಅನುಬಂಧ

**2013–14ನೇ ಸಾಲಿನಲ್ಲಿ ರಾಜ್ಯದಲ್ಲಿ ಬೆಳೆದ ರಾಗಿ ಬೆಳೆಯ ಜಿಲ್ಲಾವಾರು ವಿವರಗಳು**

| ಕ್ರ. ಸಂ. | ಜಿಲ್ಲೆ | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಉತ್ಪಾದನೆ (ಟನ್‌ಗಳಲ್ಲಿ) |
|---|---|---|---|
| 1 | ಬೆಂಗಳೂರು (ನಗರ) | 23333 | 73286 |
| 2 | ಬೆಂಗಳೂರು (ಗ್ರಾ) | 40542 | 104079 |
| 3 | ಬೆಳಗಾವಿ | 1223 | 1114 |
| 4 | ಬಳ್ಳಾರಿ | 3861 | 3132 |
| 5 | ಚಾಮರಾಜನಗರ | 14438 | 24408 |
| 6 | ಚಿಕ್ಕಬಳ್ಳಾಪುರ | 47817 | 105307 |
| 7 | ಚಿಕ್ಕಮಗಳೂರು | 38547 | 41820 |
| 8 | ಚಿತ್ರದುರ್ಗ | 47220 | 59819 |
| 9 | ದಾವಣಗೆರೆ | 10617 | 16184 |
| 10 | ಧಾರವಾಡ | 46 | 87 |
| 11 | ಗದಗ್ | 2 | 4 |
| 12 | ಹಾಸನ | 76619 | 134983 |
| 13 | ಹಾವೇರಿ | 150 | 83 |
| 14 | ಕೋಲಾರ | 55136 | 123906 |
| 15 | ಮಂಡ್ಯ | 49979 | 97277 |
| 16 | ಮೈಸೂರು | 37237 | 62100 |
| 17 | ರಾಮನಗರ | 70289 | 176566 |
| 18 | ಶಿವಮೊಗ್ಗ | 675 | 1140 |
| 19 | ತುಮಕೂರು | 154291 | 233756 |
| 20 | ಉತ್ತರಕನ್ನಡ | 9 | 16 |
| | ರಾಜ್ಯ | **6,72,031** | **12,59,067** |